ಬಹಳ ವರ್ಷಗಳಿಂದ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅದರಲ್ಲೂ ಲೋಕೋಪಯೋಗಿ ಇಲಾಖೆಯಲ್ಲಿ ದಿನಗೂಲಿ ನೌಕರರನ್ನು ಎನ್.ಎಂ.ಆರ್.ನಲ್ಲಿ ನೇಮಿಸಿಕೊಳ್ಳುವ ಪದ್ಧತಿ ನಡೆದುಬಂದಿದೆ. ಈ ದಿನಗೂಲಿ ನೌಕರರನ್ನು ಕೆಲವು ನಿರ್ದಿಷ್ಟವಾದ ಕೆಲಸಗಳನ್ನು ಪೂರೈಸಿಕೊಳ್ಳಲು ನೇಮಿಸಿಕೊಳ್ಳಲಾಗುತ್ತಿತ್ತು. ಆ ಕೆಲಸ ಮುಗಿದ ನಂತರ ಅವರನ್ನು ಮುಂದುವರಿಸುವ ಅವಶ್ಯಕತೆ ಇರಲಿಲ್ಲ. ಇವರನ್ನು ನೇಮಿಸಿಕೊಳ್ಳುವಾಗ ಸಂವಿಧಾನದಲ್ಲಿ ಹೇಳಿರುವಂತೆ ಸಮಾನ ಅವಕಾಶ ಕೊಡಬೇಕೆಂಬ ತತ್ವವನ್ನು ಪಾಲಿಸಲಾಗುತ್ತಿಲ್ಲ. ಕರ್ನಾಟಕ ರಾಜ್ಯ ಸರ್ಕಾರೀ ದಿನಗೂಲಿ ನೌಕರರ ಮಹಾಮಂಡಲ, ಹುಬ್ಬಳ್ಳಿ ಇವರು ದಿನಗೂಲಿ ನೌಕರರಿಗೂ ಸಹ ಭವಿಷ್ಯದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ನೇಮಕಗೊಂಡ ಸರ್ಕಾರೀ ನೌಕರರಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನು ಕೊಡಬೇಕೆಂದು ಸರ್ವೋಚ್ಚ ನ್ಯಾಯಾಲಯದ ಮುಂದೆ ಅರ್ಜಿಯನ್ನು ಸಲ್ಲಿಸಿದೆ.

ಸರ್ವೋಚ್ಚ ನ್ಯಾಯಾಲಯವು ಇದರ ಬಗ್ಗೆ ತನ್ನ ಅಂತಿಮ ನಿರ್ಣಯಕೊಡಬೇಕಾಗಿದೆ. ಅಲ್ಲಿಯವರೆಗೂ ದಿನಗೂಲಿ ನೌಕರರಿಗೆ ಈ ಎಲ್ಲಾ ಸೌಲಭ್ಯಗಳನ್ನು ಕೊಡಲು ಸಾಧ್ಯವಾಗಲಾರದು. ಕೇಂದ್ರದ ಹಿಡುಬ್ಲ್ಯೂಡಿ ಇಲಾಖೆಯ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಸಮಾನ ಕೆಲಸಕ್ಕೆ ಸಮಾನ ವೇತನವೆಂದು ತೀರ್ಪುಕೊಟ್ಟಿದೆಯಾದರೂ ಇವರುಗಳ ಸೇವೆಯನ್ನು ಸಕ್ರಮಗೊಳಿಸುವ ಬಗ್ಗೆ ಯಾವ ತೀರ್ಪನ್ನೂ ನೀಡಿಲ್ಲ. ಇವರ ಸೇವೆಯನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರವು ಪರಿಶೀಲಿಸಬಹುದಾಗಿದೆಯೆಂದು ಮಾತ್ರ ಹೇಳಿದೆ. ಆದರೆ ಈಗಾಗಲೇ ಹೇಳಿರುವಂತೆ ಈ ದಿನಗೂಲಿ ನೌಕರರನ್ನು ನೇಮಿಸಿಕೊಳ್ಳುವುದರಲ್ಲಿ ಎಲ್ಲರಿಗೂ ಸಮಾನ ಅವಕಾಶವಿರಬೇಕೆಂಬ ಸಂವಿಧಾನ ತತ್ವವನ್ನು ಪಾಲಿಸಿಲ್ಲವಾದ್ದರಿಂದ ಇವರ ಸೇವೆಯನ್ನು ಸಕ್ರಮಗೊಳಿಸುವುದು ಕಷ್ಟಕರವಾಗುವುದು.

ಕರ್ನಾಟಕ ರಾಜ್ಯ ಸಹಕಾರಿ ದಿನಗೂಲಿ ನೌಕರರ ಮಹಾ ಮಂಡಲ ಹುಬ್ಬಳ್ಳಿ ತಮಗೆ ಒಂದು ಸ್ಥಾನ ಮತ್ತು ಸೇವೆಯನ್ನು ಖಾಯಂ ಮಾಡುವುದು ಒಳಗೊಂಡಂತೆ ೨೬ ಬೇಡಿಕೆಗಳನ್ನು ಮುಂಡಿಸಿ ಇವೆಗಳನ್ನು ಪೂರೈಸದಿದ್ದಲ್ಲಿ ಮುಷ್ಕರ ಹೂಡುವುದಾಗಿ ತಿಳಿಸಿದ್ದರು. ಈ ದಿನಗೂಲಿ ನೌಕರರಿಗೆ ಒಂದು ಸ್ಥಾನ ಕಲ್ಪಿಸಿಕೊಡುವುದು, ಅವರ ಸೇವೆಯನ್ನು ಸಕ್ರಮಗೊಳಿಸುವುದರ ಇವುಗಳನ್ನು ಮೇಲೆ ಹೇಳಿದ ಕಾರಣಗಳಿಂದಾಗಿ ಒಪ್ಪಲಾಗಲಿಲ್ಲ. ಆದಾಗ್ಯೂ ಅವರ ಇತರ ಬೇಡಿಕೆಗಳಾದ, ಪರ್ಮಾನೆಂಟ್ ಮಾಡದಿರುವುದು, ಕಿರುಕುಳಕೊಡುವುದು ಇವುಗಳನ್ನು ಪರಿಶೀಲಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಲಾಗಿದೆ. ಇವರುಗಳ ಸೇವೆಯನ್ನು ಸಕ್ರಮಗೊಳಿಸುವುದರ ಬಗ್ಗೆ ಸರ್ಕಾರ ಯಾವ ಆಶ್ವಾಸನೆಯನ್ನು ನೀಡಿಲ್ಲ.

ಈ ನೌಕರರು ಮುಷ್ಕರ ಹೂಡಿದರೂ ಸಹ ಇವರು ನಿರ್ವಹಿಸುತ್ತಿರುವ ಕೆಲಸಕ್ಕೆ ಯಾವ ಅಡಚಣೆಯಾಗದೆಂದು ಭಾವಿಸಲಾಗಿದೆ.

(೫) ಮೈಸೂರು ನಗರದಲ್ಲಿ ವೈದ್ಯಕೀಯ ವಿಶ್ವವಿದ್ಯಾನಿಲಯವನ್ನು ತೆರೆಯುವುದು

ಶ್ರೀ ಮರಿದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೆ, ಶ್ರೀ ಗುಂಡೂರಾವ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ಮೈಸೂರು ನಗರದಲ್ಲಿ ನಡೆದ ಮಂತ್ರಿಮಂಡಲದ ಸಭೆಯಲ್ಲಿ ಮೈಸೂರು ನಗರದಲ್ಲಿ ವೈದ್ಯಕೀಯ ವಿಶ್ವವಿದ್ಯಾನಿಲಯವನ್ನು ತೆರೆಯಬೇಕೆಂದು ತೀರ್ಮಾನವನ್ನು ಕೈಗೊಂಡಿತು. ಈ ತೀರ್ಮಾನದ ಬಗ್ಗೆ ಸರ್ಕಾರವು ಇದುವರೆವಿಗೆ ಏನು ಕ್ರಮ ಕೈಗೊಂಡಿದೆ ? ಯಾವಾಗ ಇದನ್ನು ತೆರೆಯಲಾಗುತ್ತೆ ಎಂಬುದರ ಬಗ್ಗೆ ಸದನದ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಚಾರದ ಚರಿತ್ರೆಯನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಕಡತ ನೋಡಿ ಉತ್ತರ ತರಿಸಿಕೊಡುತ್ತೇನೆ.

(೬) ಬೈಲಹೊಂಗಲಕ್ಕೆ ಅಗ್ನಿ ಶಾಮಕ ದಳದ ಗಾಡಿಯನ್ನು ಕಳುಹಿಸಲು ಮುಂಜೂರಾತಿ ನೀಡುವುದು

ಶ್ರೀ ಶಿವಾನಂದ ಪಟ್ಟಣ್. ಕೌಜಲಗಿ.—ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಯ ಬೈಲಹೊಂಗಲ ನಗರಕ್ಕೆ ಅಗ್ನಿಶಾಮಕ ದಳದ ಗಾಡಿಯನ್ನು ಕೂಡಲೆ ಕಳುಹಿಸಿ ಕೊಡಬೇಕು ಮಂದು ಮೋದ ಪರ್ಯಾಗ್ಯಹಮಂತ್ರಿಗಳು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, ಪೊಂಗಾರ್ಡ್ಸ್ ಮತ್ತು ಅಗ್ನಿಶಾಮಕ ದಳ ಇತರರಿಗೆ ನೀಡಿರುತ್ತಾರೆ. ಮತ್ತು ಅಗ್ರಿಕಲ್ಚರ್ ಪ್ರೊಡೂಸ್ ಮಾರ್ಕೆಟ್ ಕಮಿಟಿ ಬೈಲಹೊಂಗಲ ಇವರು ಈ ಅಗ್ನಿಶಾಮಕ ಗಾಡಿ ನಿಲ್ಲಲ್ಲು ಈಗ ಟೆಂಪರರಿ ಷೆಡ್ಡನ್ನು ಸಹ ಕಟ್ಟಿರುತ್ತಾರೆ.